ದಿನಾಂಕ 02.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:-** ವಾದಿ ಪರ ಶ್ರೀ.ಎಂ.ಆರ್.ಎಸ್. ವಕೀಲ **ರಿಂದ**

ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯವಾಗಿರುತ್ತವೆ. ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಈ ಕೇಸಿಗೆ ಸಂಬಂದಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ದಿನಾಂಕ 27.01.2021 ರಂದು ಪ್ರತಿವಾದಿಗಳು ಬರೆದುಕೊಟ್ಟ ಕ್ರಯದ ಒಪ್ಪಂದದ ಕರಾರು ಪತ್ರವನ್ನು ನಿಪಿ1 ಎಂದು ಗುರುತಿಸಲಾಯಿತು. ನಿಪಿ1 ಕ್ಕೆ ಪ್ರತಿವಾದಿಗಳು ತಮ್ಮ ಸಹಿ ಮಾಡಿರುತ್ತಾರೆ. ಸಾಕ್ಷಿಯು ನಿ.ಪಿ1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ1(ಎ) ಎಂದು, ಸಾಕ್ಷಿಯು ಪ್ರತಿವಾದಿಗಳ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ1(ಬಿ) ರಿಂದ (ಡಿ) ಎಂದು, ಸದರಿ ಪತ್ರಕ್ಕೆ ನಾಗರಾಜು ಮತ್ತು ಕಿರಣ್ ಎನ್ನುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸದರಿ ಪತ್ರವನ್ನು ಶಂಕರನಾಗ್ ಎಂಬುವವರು ಬರೆದಿರುತ್ತಾರೆ. ಸಾಕ್ಷಿಯು ಸಾಕ್ಷಿದಾರರ ಮತ್ತು ಪತ್ರ ಬರಹಗಾರರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ-1(ಇ) ರಿಂದ (ಜಿ) ಎಂದು ಗುರುತಿಸಲಾಯಿತು.

2. ಕೆ.ಆರ್.ಪೇಟೆ ತಾಲ್ಲೂಕು, ಕಿಕ್ಕೇರಿ ಹೋಬಳಿ, ದೋರೆನಹಳ್ಳಿ ಗ್ರಾಮದ ಸರ್ವೆ ನಂ.30/4 ರ ಪಹಣಿಯನ್ನು ನಿ.ಪಿ-2 ಎಂದು,

3. ದಿನಾಂಕ 09-01-2024 ರಂದು ಪ್ರತಿವಾದಿಗಳಿಗೆ ಕಳುಹಿಸಿದ ಲೀಗಲ್ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ3 ಎಂದು,

4. ದಿನಾಂಕ 28-02-2025 ರಂದು ಪ್ರತಿವಾದಿಗಳಿಗೆ ಕಳುಹಿಸಿದ ಲೀಗಲ್ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ4 ಎಂದು,

5. ಮೂರು ಅಂಚೆ ರಶೀದಿಗಳನ್ನು ನಿಪಿ5 ರಿಂದ 7 ಎಂದು,

6. 1ನೇ ಪ್ರತಿವಾದಿಗೆ ಜಾರಿಯಾಗದೇ ಹಿಂದಿರುಗಿದ ಒಂದು ನೋಂದಾಯಿತ ಅಂಚೆ ಲಕೋಟೆಯನ್ನು ನ್ಯಾಯಾಲಯದ ಮುಂದೆ ತೆರೆದು ನೋಡಲಾಗಿ ಅದರೊಳಗಿರುವ

ನೋಟಿಸನ್ನು ನಿ.ಪಿ.8 ಎಂದು, ಅಂಚೆ ಲಕೋಟೆಯನ್ನು ನಿಪಿ.8(ಎ) ಎಂದು,

7. ಕೆ.ಆರ್.ಪೇಟೆ ಅಂಚೆ ಕಛೇರಿಯ ಪೋಸ್ಟ್ ಮಾಸ್ಟರ್ ರವರು ನೀಡಿದ ಗಣಕೀಕೃತ ಅಂಚೆ ಸ್ವೀಕೃತಿಯನ್ನು ನಿ.ಪಿ.9 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ದಿನಾಂಕ 24.06.2024 ರ ಒಂದು ನೊಂದಾಯಿತವಲ್ಲದ ಕ್ರಯದ ಒಪ್ಪಂದದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಸದರಿ ಪತ್ರದ ಮುದ್ರಾಂಕ ಶುಲ್ಕ ಮತ್ತು ದಂಡದ ಪಾವತಿ ಮೇಲಿನ ವಾದ ಮಂಡನೆಗಾಗಿ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.